Regd.No. M. 1299 ॥ सत्यान्नास्ति परोधर्मः ॥ ಸಿಡಿ ಪ್ರತಿ 3

ಸತ್ಯವಾದಿ

ಆಫೀಸ್: ಚಾಮರಾಜ ಅಗ್ರಹಾರ ಮೈಸೂರು. ಪ್ರತಿ ಗುರುವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ ಅಂಚೆಖರ್ಚು ಸೇರಿ ರೂ 1-8-0

ಸಂಪುಟ 7] ಮೈಸೂರು, ಗುರುವಾರ 15 ನೆ ಜನವರಿ 1925 [ಸಂಚಿಕೆ 10

'ಸತ್ಯವಾದಿ'

—o—

ಗುರುವಾರ 15 ನೆ ಜನವರಿ 1925

ಗೋ ಮಹಾಸಭೆ.

—

ಕಳೆದ 29 ನೇ ತಾರೀಖಿನ ದಿವಸ ಬೆಳಗಾವಿ ನಲ್ಲಿ ಮಹಾತ್ಮಗಾಂಧಿಯವರ ಅಧ್ಯಕ್ಷತೆಯಲ್ಲಿ ಗೋ ಮಹಾಸಬೆಯು ನಡೆಯಿತು. ಮಹಾತ್ಮರು ಹಿಂದೂದೇಶದಲ್ಲಿ ಗೋವುಗಳು ಹಿಂದುಗಳಿಂದ ಸರಿಯಾಗಿ ಕಾಪಾಡುತ್ತಲಿಲ್ಲವೆಂದೂ, ಇದು ಅತನಿಗೆ ಕ್ರಿಶ್ಚಿಯನ್ ಮಿಸಲ್ಮಾರ್ಕರವರು ಗೋ ಹತ್ಯಮಾಡುವುದಕ್ಕಿಂತ ಹೆಚ್ಚು ಸಂಕಟವನ್ನುಂಟುಮಾಡುತ್ತಿದೆಯೆಂದೂ ತಿಳಿಸಿದರು. ಗುಜರಾತಿನಲ್ಲಿ ಗೂಳಿಗಳನ್ನು ಕೊಲ್ಲುತ್ತಾರೆಂದೂ, ಕಲ್ಕತ್ತಾದಲ್ಲಿ ಹಾಲನ್ನು ಹಸುಗಳಿಂದ ರಕ್ತ ಬರುವವರೆಗೂ ಪೂರ್ತಿ ಕರೆದುಕೊಳ್ಳುತ್ತಾರೆಂದೂ ಗೋವುಗಳ ವಿಷಯದಲ್ಲಿ ಜನರಿಗೆ ಸರಿಯಾದ ಪ್ರೀತಿ ವಿಶ್ವಾಸ ಕಂಡುಬಂದಿಲ್ಲವೆಂದೂ ತಿಳಿಸಿದರು. ಸ್ವರಾಜ್ಯಕ್ಕೆ ಅಸ್ತಿಭಾರವಾದುದು ಹಿಂದೂ-ಮಿಸಲ್ಮಾರ್ಕ ಏಕ್ಯ ಮಿಸಲ್ಮಾನರು ಗೋ ಕೊಲ್ಲಕೂಡದೆಂದು ನಾವು ಅವರನ್ನು ಕೇಳಿಕೊಳ್ಳಬೇಕಾದರೆ, ಹಿಂದುಗಳು ಗೋವುಗಳನ್ನು ಸರಿಯಾಗಿ ಸಾಕಬೇಕು. ಮುದಿ ಹಸುಗಳನ್ನು ಕಟುಕರಿಗೆ ಮಾರುವವರು ಹಿಂದೂಗಳೆಂದು ತಿಳಿಸಿದರು. ಈ ವಿಷಯಗಳೆಲ್ಲವನ್ನೂ ಸಾಂಗವಾಗಿ ಪರೀಕ್ಷಿಸತಕ್ಕ ಏರ್ಪಾಡುಮಾಡಲು ಒಂದು ಸಂಘ ಸ್ಥಾಪನೆಯಾಯಿತು,

---

ಹಿಂದೆ ಬೊಂಬಾಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾಗಿದ್ದ ಮಿ॥ ಮಾರ್ಮಡ್ಯೂಕ್ ಪಿಕ್ತಾಲ್‌ರವರನ್ನೂ ಹೈದರಾಬಾದಿನ ಸ್ವಜಾಮನು ಹೈದರಾಬಾದಿನ ಚಾದರ್‌ಘಾಟ್ ಹೈಸ್ಕೂಲಿಗೆ ಮುಖ್ಯಸ್ಥರಾಗಿ ನಿಯಮಿಸಿರುತ್ತಿರೆಂದು "ಮಿಸ್ಲಿಂ ಔಟ್‌ಲುಕ್" ಎಂಬ ಪತ್ರಿಕೆಯು ಪ್ರಕಟಿಸಿರುತ್ತದೆ

10 ನೇ ತಾರೀಖಿನ ದಿನ ಬೆಂಗಳೂರು ಮುನಿಸಿಪಲ್ ಪ್ರೆಸಿಡೆಂಟರ ಚುನಾವಣೆ ನಡೆಯಿತು. ಅಬ್ಬಿಪ್ ಖಾರ್ ರನವರಿಗೆ ಗರುಡಾಚಾರ್ಯರಿಗಿಂತ ೩ ವೋಟುಗಳು ಹೆಚ್ಚಾಗಿ ಬಂದು ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು.

ಕಲಾಮಂದಿರಂ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೆಯಿಂಟಿಂಗ್ ಎಲಾರ್ಜ್‌ಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತರಬೇತಿ ಮಾಡುವೆವು. ಈ ಒಂದು ತಿಂಗಳವರೆಗೆ 15 12 ಸೈಜು ಎಲಾರ್ಜ್‌ಮೆಂಟ್ ಮಾಡುವುದಕ್ಕೆ ಕ ಮ್ಮಿ ಚಾರ್ಜ್ ಅಂದರೆ 12 ರೂಪಾಯಿಗೆ ಮಾಡಿ ಕೊಡುವೆವು. ಫೋಟೋ ಮತ್ತು ಅರ್ಧ ಹಣ ಬರಬೇಕು.

ಭಾರತ ಸರ್ವಸ್ವ

—

ಭೂತಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನೀದೇವಿಯವರ ಸುಪ್ರಸಿದ್ಧ ವುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುವುದರ ಕನ್ನಡ ಪರಿವರ್ತನೆ ಕ್ರಯ 1 ಆಣೆ. ಒಂದೂವರೆಆಣೆಯ ಸ್ಟ್ಯಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ

ವಿಳಾಸ—ಸತ್ಯವಾದಿ ಆಫೀಸ್ ಮೈಸೂರು

MYSORE GOVERNMENT
LOAN BONDS
&
SHARES OF PROMINENT
COMPANIES

—

BOUGHT & SOLD

—

For Particulars apply to
THE SEMAH ELISHA COMPANY
MYSORE

ಮೈಸೂರು ಸರ್ಕಾರಿ ಸಾಲದ ಪತ್ರ
ಮತ್ತು ಕಂಪೆನಿ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ ಮತ್ತು ಬಿಕರಿ
ಮಾಡುತ್ತೇವೆ

—

ವಿಳಾಸ:—ಸೇಮಾ ಇಲ್ಯೀಷಾ ಕಂಪೆನಿ,
ಮೈಸೂರು

೧೦೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

—

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ ಸ್ವಪ್ನೇಂದ್ರಿಯ ವಾದರೂ ಸ್ತ್ರೀಸಂಗಕ್ಕೆ ಮೊದಲೇ ಸ್ಖಲನವಾದರೂ ಮೂತ್ರದೊಂದಿಗೆ ಹೋಗುತ್ತಿದರೂ, ದೋಷರಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವುದು ಅಜೀರ್ಣ, ವಲಬದ್ಧತೆ, ವೆದುನಿಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರಿ' ಎಂಬುವದು ಕಾಬೂಲ್ ಕಂದಹಾರಪ್ರಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕದೇವೆಗಳಿಂದಲೂ, ಅಪ್ರಿಕ ಬರ್ಮ ಪೀನಾಂಗ್ ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರುಬೇಕಾದರೂ ತರಿಸಿನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. 1 ಡಬ್ಬವನ್ನು 15 ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು 2 ಯಾ 3 ಡಬ್ಬಗಳು ಪೂರ್ಣವಾಗಿ ಗುಣವನ್ನುಂಟುಮಾಡುವವು. ಅನುಪಾನಪಕ್ಕಿಕೆಯು ಡಬ್ಬಿಯ ಸಂಗಡಲೇ ಇರುತ್ತೆ. ಹೆಸರು ವಿಳಾಸ ಚೆನ್ನಾಗಿ ತಿಳಿಯುವಂತೆ ಇರಬೇಕು

ಕ್ರಯ ಡಬ್ಬಿ 1 ಕ್ಕೆ ರೂ. 2—0—0 ಟಪ್ಪಾಲು ಖರ್ಚು ಬೇರೆ 3 ಡಬ್ಬಿಗಳಿಗೆ ಲ ಆಣೆ ಏಜೆಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿ ಕೊಳ್ಳಬಹುದು.

ಟೆಲಿಗ್ರಾಫ್ ಅಡ್ರೆಸ್—ಮಿಸ್ರಿ, ಬೆಂಗಳೂರು ಸಿಟಿ
ವಿಳಾಸ ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬಾ ಡಿಪೋ,
ಬೆಂಗಳೂರು ಸಿಟಿ.

ಬೀಡಿಯ ಸ್ವಯಂ ಚರಿತ್ರೆಯು.

ನನ್ನ ಹೆಸರು ಬೀಡಿ. ನನ್ನಕ್ಕನ ಹೆಸರು ಚುಟ್ಟ. ನನ್ನ ತಂಗಿಯ ಹೆಸರು ಸಿಗರೇಟ್. ನನ್ನ ತಂಗಿಯ ಹೆಸರು ತಂಬಾಕು. ನನ್ನ ಮಾತೆಯ ಹಿ (ತಾಯಿಯ ತಾಯಿ) ಹೆಸರು ಗಾಂಜ. ಇದು ನನ್ನ ಸ್ತ್ರೀಬಂಧುಗಳ ವೃತ್ತಾಂತವು ಇಷ್ಟೇ ಅಲ್ಲದೆ ಅಫೀಂ, ಭಂಗ್, ಜಸ್, ಮದರ್, ಮೂಜಂ ಮೊದಲಾದ ಜಾತಿವರ್ಗವೂ, ನಶ್ಯ, ಕಾಪ್ಪ ಕಡ್ಡಿಪುಡಿ ಮೊದಲಾದ ರಕ್ತಬಂಧುಗಳೂ, ಪುಷ್ಕಳ ಪರಿವಾರವಿರುವರು. ಇನ್ನು ನನ್ನ ವುರುಷ ಬಂಧುಗಳಂದೆನೂ ಭೂಜಕ್ರವನ್ನು ತಮ್ಮ ಕೊನೆಬೆರಳಲ್ಲಿಟ್ಟುಕೊಂಡು ವುರುಷರೆನ್ನದೆ ಸ್ತ್ರೀರೆನ್ನದೆ, ಮುದುಕರೆನ್ನದೆ, ಹುಡುಗರೆನ್ನದೆ ಸ್ವಲ್ಪ ಹೆಚ್ಚು ಕಮ್ಮಿ ಈ ಪ್ರಸಂಗಗಳಲ್ಲುಳ್ಳ ಸಮಸ್ತ ವರ್ಣದವರನ್ನು ತಮ್ಮ ದಾಸಾನ ದಾಸರಂತೆ ಮಾಡಿಕೊಂಡು, ನಿರಂಕುಶವಾಗಿ (ಸುರ) ರಾಜ್ಯಪರಿಪಾಲನೆಯನ್ನು ಮಾಡಿವ ಸುಪ್ರಸಿದ್ಧರಾದ ಹೆಂಡ, ಸಾರಾಯಿ, ಬೀರು, ಬ್ರಾಂದಿ, ವೈಕ್, ರಂ, ಡಂ, ಡಪ್ ಮೊದಲಾದವರು. ಜನ್ಮಭೂಮಿಯೋ ಪಶ್ಚಿಮದೇಶವು. ಅಲ್ಲಿ ಖ್ಯಾತಿಯಲ್ಲಿರುವ ಅಮೆರಿಕಾ ದೇಶವು ನಿನ್ನ ವಾಸಸ್ಥಳವು. ಸಹವಾಸವೋ ನವಯವ್ವನರಾದ ಸ್ತ್ರೀವುರುಷರೊಂದಿಗೆ ಹಿಂಗಿರಲು. ಭೂ, ಭುವಃ, ಸುವರ್ಲೋಕಗಳೆಂಬ ಈ ಮೂರು ಲೋಕಗಳಲ್ಲಿ ನನ್ನ ಮಾನಕ್ಕಾಳಿ ಅಷ್ಟಲ್ಲದೆ ನನ್ನನ್ನು ಚಿತ್ರವಿಚಿತ್ರವಾಗಿ ಮಂಡಿಸಿದ ಬೆಳ್ಳಿ ಭಂಗಾರದ ಭರಣಿಗಳಲ್ಲಿರಿಸಿ ತಮ್ಮ ಬಹಿಃ ಪ್ರಾಣವಾಗಿ ವೆಕ್ಟೋಪ್ ಭೋಗದಲ್ಲಿ ವಾಚ್ ಪಾಕಿಟ್ಟುಗಳಲ್ಲಿರಿಸಿಕೊಂಡಿರೇ ಪಾಪ ? ಹಳ್ಳಿಗಾಡಿನವೆಂಗೆ ಜೆಳ್ಳೇ ಭಂಗಾರದೆ ಕೇಸುಗಳಿಲ್ಲವು. ಆದ್ದರಿಂದ ಬಹು ಭಕ್ತಿಯಾಗಿ ನನ್ನನ್ನು ತಲೆಯ ಮೇಲೆ ಹೊತ್ತುಕೊಂಡು (ತಲೆಗೆ ಸುತ್ತುವ ಬಟ್ಟೆಯಲ್ಲಿರಿಸಿಕೊಂಡು) ತಿರುಗುತ್ತಿರುವರು. ವುರುಷ ಶಾರ್ದೂಲಗಳ ಮಾತು ಹಾಗಿರಲು, ಸ್ತ್ರೀರತ್ನಗಳನ್ನು ವಿಚಾರಿಸೋಣವೆ ? ಈ ಇಪ್ಪತ್ತನೆಯ ಶತಾಬ್ದ ಸುಂದರೀಮಣಿಗಳಲ್ಲಿ ಕೆಲವರು ನನ್ನಲ್ಲಿನ ಪ್ರೇಮಾತಿಶಯಕ್ಕಾಗಿ ಕಂಚುಕ [ಕುಪ್ಪುಸ] ದೊಳಗೆ ನನ್ನನ್ನ ಪ್ರಾಣಪ್ರದವಾಗಿ ಗುಟ್ಟಾಗಿಟ್ಟುಕೊಂಡು ತಮ್ಮ ಚಿತ್ತಾಪಹಾರರಾದ ನವಯುವ್ವನರಿಗೊಂದೊಂದಾಗಿ ತೆಗೆದು ಕೊಡುತ್ತಲಿದ್ದಾರೆ. ನನ್ನನ್ನೇ ಎಕನ್ನು ವಿರಿ ! ನಮ್ಮವರೆಲ್ಲರೂ ಇಂಥಾ ಗೌರವಸ್ಥರೇ ನೀಚತ್ವವೆಂಬುವದು ಕಾಣವೇ ಕಾಣವು , ಲೋಕದಲ್ಲಿ ಸಮಸ್ತ ಭೋಜ್ಯವಸ್ತು ಸಮುದಾಯಕ್ಕೆ ಸೊಂಕು ವೈಲಿಗೆ ಎಂಜಲು ಮೊದಲಾದ ದೋಷಾದಿಗಳಿರುವುದಲ್ಲದೆ— ನನ್ನೊಬ್ಬಳಿಗೇ ಎಂಬುವದೇಕೆ ನಮ್ಮವರೆಲ್ಲರಿಗೂ ಕಡೆಗೆ ನಮ್ಮ ಜಾತಿಗೆ ಈ ತುಚ್ಛವಾದ ದೋಷಗಳು ಇಲ್ಲವೆಂದು ಸಾಕ್ಷಾತ್ ತ್ರಿಮೂರ್ತಿ ಸ್ವರೂಪನಾದ ಅವಿಷ್ಣುಮೂರ್ತಿಯೇ ಸಮಾಧಾನ ಕೊಟ್ಟಿರುವನು.

ಸಾಧಾರಣವಾಗಿ ನೀತಿಗಳೆಲ್ಲವೂ ನೂರಕ್ಕೆ 99 ಗ್ರಂಥಗಳೊಳಗೆನ್ನೆ ಅಲ್ಲದೆ ಆಚರಣೆಯಲ್ಲಿ ಕಾಣೂವರದು, , ನಮ್ಮವರದು ಬರೀ ಸುಳ್ಳುಮಾತುಗಳಲ್ಲವು. ನಮ್ಮ ಸಹಿತ್ಯಗ್ರಂಥಗಳನ್ನು ಪರೀಕ್ಷಿಸಲು ಎಣಿಸಿದರೂ ನಮ್ಮವರ ಕಾರ್ಯಾರ್ಜನಾಗಳಿಗೊಂದಾವರ್ತಿ ದಯಮಾಡಿರಿ. ಈ ನಿಮಿಷದಲ್ಲಿ ಮಾದಿಗನ ಬೆಯಿಯಲ್ಲಿದ್ದ ಗಡಿಗೆಯು ಪತ್ತೆ ನಿಮಿಷದಲ್ಲಿ ಹಜಾವನೆ ಬಾಯಿಯಲ್ಲಿ ಈ ನಿಮಿಷದಲ್ಲಿ ತುರುಕ ಯುವಕನ ಬಾಯಿಯೊಳಗಿನ ಸಿಜರ್ಸ್ ಸಿಗರೇಟ್ ಛೂರು ಮತ್ತೆ ಕ್ಷಣದಲ್ಲಿ ಅಗಲಗಲವಾಗಿ ನಾವುಗಳುಳ್ಳ ಪರಮ ವೈಷ್ಣವೋತ್ತಮನ ಬಾಯಿಯಲ್ಲಿ. ಈ ನಿಮಿಷದಲ್ಲಿ ಅಗಸನ ಬಾಯಿಯೊಳಗಿನ ಬೀಡಿಯು ಮತ್ತೆ ನಿಮಿಷದಲ್ಲಿ ವಿಭೂತಿಕಟ್ಟುಹಾಕಿಸಿಕೊಂಡ ಪರಮ ಶೈವನ ಬಾಯಿಯಲ್ಲಿ, ರಿಪ್ರೆಸೆಂಟೇಟಿವ್ ರೂಮುಗಳೆಲ್ಲೆಲ್ಲಿ ನೋಡಿದರೂ ನಮ್ಮವ ವೈಭವವು ಸಾಸಿವೆ ಬಾಯಿಯಿಂದ ಹೊಗಳುತ್ತದೆ. ಯಾವ ಸಾರಾಯಿ ಅಂಗಡಿಯಲ್ಲಿ ನೋಡಿದರೂ ಝೂಡಿಗಳಿಗೆ ಹೂವಿನಹಾರಗಳು, ಅಗರುಬತ್ತಿಗಳ ಸುವಾಸನೆಗಳು, ಅರಿಶಿನ ಕುಂಕುಮದ ಬೊಟ್ಟುಗಳು, ಕರ್ಪೂರದ ಆರತಿಗಳು, ಯಾವ ಹೆಂಡದ ಅಂಗಡಿ ಹತ್ತಿರ ನೋಡಿದರೂ ಕೂಳಿಗಳ ಜೂಜು ವೀರಾಲಾಪಗಳು, ಹೆಂಡದ ಝೂಡಿಗೆ ಸಾಂಪ್ರಾಣಿಹೊಗೆಯು, ಭೂಮಿ ಆಕಾಶಗಳು ತುಂಬುವಂತೆ ಜಯನಿನಾದಗಳು, ಕಂತಾಡನಗಳು ಆಹಾ ! ಏನು ನಮ್ಮ ವೈಭವವು ನಮ್ಮ ವೈಭವನವನ್ನು ಸಂಪೂರ್ಣವಾಗಿ ಹೊಗಳಲು ಸಹಸ್ರ ಬಾಯುಳ್ಳ ಆದಿಶೇಷನಿಗಾದರೂ ಸಾಧ್ಯವೆ ? ಅಸಾಧ್ಯವು, ಅಸಾಧ್ಯವು. ನಮ್ಮವರನ್ನು ಸುರಕ್ಷಿತವಾಗಿ ಕಾಪಾಡಲೆಷ್ಟು ಜನ ಕಮೀಷನರು ಎಷ್ಟು ಜನ ಸರ್ಕಲ್ ಇನ್ಸ್ಪೆಕ್ಟರು, ಎಷ್ಟು ಜನ ಪೋಲೀಸಿನವರು! ನಮ್ಮಂಗರಕ್ಷಣರಾಗಿ ನಿಂತಿರುವರೂ ಎಣಿಸಲು ಸಾಧ್ಯವೆ.

ಸುಖವೆಂದರೆ ಹೀಗೆಯಲ್ಲವೆ ಇರಬೇಕು. ತಾನು ತನ್ನವರು ಕೀರ್ತಿವಂತರಾಗಿರಲು ನೋಡುವದಕ್ಕೆ ಯಾವ ಪ್ರಾಣಿ ತಾನೆ ಆನಂದದಾಯಕವಾಗದಿರದು. ಆಗರ್ಭಶ್ರೀಮಂತಳೆಂದರೆ ನಾನೇ. ಆದರೂ ಒಂದು ಲೋಪವಿರುವುದಲ್ಲದೆ ಕೇಳತಕ್ಕವರುಂಟೆ ? ಸೃಷ್ಟ್ಯಾದಿಯಿಂದಲೂ ನನ್ನ ಮತ್ತು ನನ್ನ ಜಾತಿಯವರ ಸ್ನೇಹ ಬೆಳೆಸಿದವರೊಬ್ಬರಾದರೂ ಉಳಿಯದೆ ಕೆಟ್ಟುಹೋದರೆಂದು ವೃದ್ಧರೂ ಪುರಾಣಿಕರೂ ವಂಡೂಕದಂತೆ ಪದರುತ್ತಿರುವರು ಆದರೆ ಕಾರ್ಯಥಃ ಸಾಧಿಸಿದ್ದೆನು ! ಸೊನ್ನೆ. 1911ನೆ ಇಸವಿಯಲ್ಲಿ ಒಂದು ಮದ್ರಾಸ್ ರಾಜಧಾನಿಯಲ್ಲೇ 1628178 ಗ್ಯಾಲ್ಕ್‌ಗಳ ನಾಟಾ ಸಾರಾಯಿಯೂ 106937147 ಗ್ಯಾಲ್ಕ್‌ಗಳ ಹೆಂಡವೂ, ಸುಮಾರು 2 ಲಕ್ಷ ರೂಪಾಯಿಗಳ ಸಾಟಿಬೀಡಿ. ಸಿಗರೇಟುಗಳೂ ಖರ್ಚಾಗಿರಲು ಒಟ್ಟು ಹಿಂದೂ ದೇಶದಲ್ಲಿ, ಒಂದು ಹಿಂದೂದೇಶವೆಂಬುವದ್ಯಾಕೆ ಭೂಮಂಡಲವೆಲ್ಲೆಯೆಡೆಯಲ್ಲೂ ಎಷ್ಟು ಖರ್ಚಾಗಿರವುದೊ ಲೆಕ್ಕಾಹಾಕಿ ನೋಡಿರಿ. ಮತ್ತೆ ಆಗಿನ ಲೆಕ್ಕಕ್ಕೂ ಈ ದಿನದ ಲೆಕ್ಕಕ್ಕೂ ಹೋಲಿಸಿ ನೋಡಿದರೆ ಈಗ್ಯೆ ಒಂದಕ್ಕೆರಡರಷ್ಟೂ, ಮೂರರಷ್ಟೂ ಬೆಳೆದುಹೋಗಿರುವುದು. ನನ್ನ ಪ್ರಭಾವ ಬಹಳ ದೊಡ್ಡದು. ವುರುಷರು ಸ್ತ್ರೀರನ್ನ ಹೆಂಗಿಸರೆನ್ನುವರು, ನಾನು ನಾರಿಯ ಜಾತಿಗೆ ಸೇರಿದವಳಾದುದರಿಂದ ನಾವು ನಾರಿಯರಲ್ಲಿ ನರರನ್ನ ಕೂಡಿಸಿ ತಕ್ಕಪರಿಂದು ಹೇಳೋಣವೆ ಜಂದು ಅಂದುಕೊಳ್ಳುತ್ತೇನೆ. ಮಾತುಗಳು ಹ್ಯಾಗಿದ್ದರೇನು. ಕಾರ್ಯವು ತೋರಿಸಬೇಕು — ಕಾರ್ಯದಲ್ಲಿರುವದು ಜಗತ್ಪ್ರಸಿದ್ಧವು.

ಬೀಡಿ ಹತ್ತಿಸಿದರೆ ದುರ್ಗಂಧನೆಂದು ಕೆಲವರು ಉಸಿರಾಡಡಂತೆ ಸಾಯುವ ರೀತಿಯಲ್ಲಿ ಕೈಬಟ್ಟೆಗಳಿಂದ ಮೂಗನ್ನು ವಚ್ಚಿಕೊಳ್ಳುವರು. ಮಧುಪಾನವು ಮಾಡಿದರೆ ಮಾನಹಾನಿ ಸಂಭವಿಸುತ್ತೆಂದೆನ್ನುವರು. ನಿಜವೋ, ಆದರೂ ಬಿಡಿಸಿದವರ್ಯಾರು ? ಬಿಟ್ಟವರ್ಯಾರು ?

ರೈಲುಗಾಡಿಯಲ್ಲೊಬ್ಬನು ಚುಟ್ಟಾ ತೆಗೆಯಬೇಡವೆಂದರೆ ಮತ್ತೆ ನಾಲ್ಕುಜನ ತಗಲಿಕೊಂಡು ಹಾಗೆ ಬೇಡವೆಂದವನ ಮುಖದ ಕಡೆಗೆ ಹೊಗೆ ಬಿಡುತ ಅವನನ್ನು ಕೆಳಕ್ಕೆ ತಳ್ಳಿ ಹೋಗುವಂತೆ ನನ್ನ ಪಕ್ಷಕ್ಕೆ ಸೇರಿದವರು ಪ್ರಾಣಪ್ರದವಾಗಿ ಕೆಲಸಮಾಡುತ ನಿನ್ನ ಪ್ರತಿಪಕ್ಷವನ್ನು ಹುಚ್ಚುಸುತ್ತಲಿರುವರು. ಕೆಲಸರು ಹಾಲು, ಮೊಸರು, ಮೊದಲಾದುವು ತಿಂದರೆ ಆಯುಸ್ಸು ಹೆಚ್ಚುವುದೆಂದೂ ಬುದ್ಧಿ ಸೂಕ್ಷ್ಮವುಂಟಾಗುವುದೆಂದೂ ರೋಗಗಳು ಬಾರದೆಂದೂ ದೇಹಕ್ಕೆ ಹೊಸ ಬಲ ಬರುವದೆಂದೂ ಹೇಳುತಲಿರುವರು. ಹಾಲೊ ಮೊಸರೊ ಎಂದು ಬೆಳಿಗ್ಗೆ ಸಾಯಂಕಾಲ ಗೊಲ್ಲರು ಹಾಲು ಮಾರದೆ ಬಿದಿಬೀದಿಯು ಉಸಿರುಸಿಕ್ಕೊಳ್ಳುವಂತೆ ವಂತೆ ಪಟ್ಟಿಯಾಗಿ ಅರಚಿಕೊಳ್ಳುತ್ತಲಿರುವರಲ್ಲದೆ ಎಷ್ಟು ಜನ ಕೊಂಡರು, ಎಷ್ಟು ಜನ ತಿಂದರು ಹೋಗು! ನನ್ನ ಬಂಧುಗಳ ಅಂಗಡಿಗಳನ್ನು ನೋಡು ತಮಾಷೆಯ. ಒಬ್ಬರ ಒಟ್ಟೆಯು ಮತ್ತೊಬ್ಬರ ಕೈಯಲ್ಲಿ, ಒಬ್ಬರ ಪಂಚೆಯು ಮತ್ತೊಬ್ಬರದು; ಒಬ್ಬರೊಬ್ಬರು ಮಾತಾಡಿಕೊಳ್ಳುವದಕ್ಕೆ ಸಮಯವಿಲ್ಲವು. ಕಳಕ್ಕೆ ಬಿದ್ದುಹೋದ ದುಡ್ಡು ಆರಿಸಿಕೊಳ್ಳುವದಕ್ಕಾ ಕೂಡ ಇಲ್ಲದೆ ಲೆಕ್ಕವಾಡಿಕೊಳ್ಳುವದಕ್ಕೂ ಸಮಯವಿಲ್ಲ. ನೀನು ಮುಂದು ನಾನು ಮುಂದು ಅಗುತಲಿದ್ದಾಗ್ಯೆ ಸಿಕ್ಕದು ಕಾಲುಗಳೆಲ್ಲಾ ತುಳಿದುಬಿಟ್ಟರು. ಹೆಂಡವು ಹೆಚ್ಚಾಗಿ ಕಳಕ್ಕೆ ಸುರಿದುಹೋಯಿತು. ಪಾಪಿಮುಂಡೇಮಗ ಮೂರತಕ್ಕವನು ಹಳಸಿಹೋದ ಹೆಂಡ ಮಾರುವದಲ್ಲದೆ ಕಮ್ಮಿಯೂ ಬಿಟ್ಟನು. ಭಂಡಿಹೊಡೆಯುವ ದುರ್ಮಾರ್ಗನು ನೀಚನ್ನು ಬೆರೆಸಿದನು. ಕೇಳದಿರಾ ವೃತ್ತಾಂತವು ತಪ್ಪು. ಎಲ್ಲವು ನಿಮ್ಮವರದಲ್ಲವೆ ನಂದು. ನಮ್ಮವದೆಷ್ಟುಮಾತ್ರವಲ್ಲವು. ಕಂಡೆಯು ! ಇಂಥಾ ನಮ್ಮನ್ನು ತಳ್ಳಿಬಿಡಬೇಕೆಂದರೆ [ಸೃಷ್ಟಿಯಾ] ಪ್ರಪಂಚವು ಗಿರಗಿರೆಂದು [ತಿರಗಿ ಸುತ್ತಿ] ನಕ್ಷತ್ರಗಳಂತೆ ನೆಲಕ್ಕೆ ಬಿದ್ದಾವು.

ಸತೀಷ.

ಮೈಸೂರು ಮಹಾರಾಜಾಕಾಲೇಜಿನ ಬಿ.ಎ. ತರಗತಿಯ ವಿದ್ಯಾರ್ಥಿಗಳಲ್ಲಿ ಕೆಲವರು ಪ್ರೊಫೆಸರ್ ಗೋವಾಲ ಸ್ವಾಮಿಯವರೊಡನೆ ಹಂಪೆಗೆ ಕ್ರಿಸ್ಮಸ್ ರಜಕ್ಕಾಗಿ ಹೋಗಿದ್ದರಿಂದೂ, ಆಗ ಇವರ ಪೈಕಿ ಒಬ್ಬನಾದ ಶ್ರೀನಿವಾಸನ್ ಎಂಬಾತನು ಅಲ್ಲಿಯ ಒಂದಾನೊಂದು ಕೊಳಕ್ಕೆ ಸ್ನಾನ ಮಾಡಲು ಹೋಗಿ ಆಳವಾದ ನೀರನಲ್ಲಿ ಸಿಕ್ಕಿ ವ್ಯಕನಾದನೆಂದು ತಿಳಿಯಬಂದಿದೆ.

ಹಾಸನದ ಪೌರಾಭಿವೃದ್ಧಿ

[ನಮ್ಮ ಸ್ವಂತ ಬಾತ್ಮಿದಾರರಿಂದ]

ಇದೇ ಜನವರಿ ಗುರ್ರೇ ತಾರೀಖು ಲಾಗಾಯ್ತು ಹಾಸನದಲ್ಲಿ (ಕ್ಯಾಟಲ್ ಶೊ) ಪಶುಗಳ ಪ್ರದರ್ಶನ ಉಪಕ್ರಮವಾಗಿ ಸುಮಾರು ೪೦೦೦೦ ರೂಪಾಯ್ಕೆ ವೇಲ್ಪಟ್ಟು ಸೇರಿದ್ದವು. ಬಹಳ ಒಳ್ಳೇ ರಾಸುಗಳು ಒಂದಿದ್ದವು. ಹಾಸನದ ಟೌನ್ ಮುನಿಸಿಪಾಲಿಟಿಯವರು ಬಹಳ ಮೆಹನತ್ತು ಮಾಡಿ ದನಗಳಿಗೆ ನುಚ್ಚಾಗಿ ನೀರನ್ನೂ ಮತ್ತು ಸ್ಥಳವನ್ನೂ ಕಲ್ಪಿಸಿಕೊಟ್ಟಿದ್ದುದರಿಂದ ಇಷೊಂದು ದನಸಮೂಹವೂ ವೇತ್ತು ಒಕ್ಷಾಂತರಕ್ಕೆ ವೇಲ್ಪಟ್ಟು ಜನಸಮೂಹವೂ ನೋಡುವುದಕ್ಕೆ ಬರಲು ಅಸ್ಪದವಾಯಿತು. ಇಲ್ಲಿಯ ಡೆಪ್ಯುಟೀಮಿಷನರವರಿಂದ 3 ನೆ ತಾರೀಖಿನಲ್ಲಿ ಪ್ರದರ್ಶನವು ತೆರೆಯಲ್ಪಟ್ಟಿತು. 4 ನೆ ತಾರೀಖುಗಳಲ್ಲಿ ಜನಗಳಿಗೆ ಉಪಯುಕ್ತವಾದ ಉಪನ್ಯಾಸಗಳು ನಡೆದವು ಮತ್ತು ಒಳ್ಳೆ ರಾಸುಗಳಿಗೆ ಬಹುಮಾನ ಕೊಡಲ್ಪಟ್ಟಿತು. 2 ಕ್ಕೆ ಚೆನ್ನಾದ ಮೆಡಲು ದೊರೆತವು ಮುನಿಸಿಪಾಲಿಟಿಯವರು ದನಗಳಿಗೆ ಖಾಯಿಲೆ ಎಂದು ಸಾಬಿಸಿದ್ದರಿಂದ ದನ ನುಕ್ಕು ಜನರು ಹಾಸನವನ್ನು ಬಿಟ್ಟುಹೊಡಲು ಪ್ರಾರಂಭಿಸಿದರು. ಆದರೆ ದೇವರ ದಯೆಯಿಂದ ದನಗಳಿಗೇಆಗಲಿ ಜನರಿಗೇ ಆಗಲಿ ಯಾವದೊಂದು ಖಾಯಿಲೆಯೂ ಇಲ್ಲದೆ ಏನು ತೊಂದರೆಯೂ ಆಗದೆ ಊರಿಗೆ ಹೊರಬರು. ಜಾತ್ರೆಗೆ ದೇವಲ್ ಸರ್ಕಸ್ಸಿನವರೂ ಇನ್ನೊಂದು ಸರ್ಕಸ್ಸಿನ ಕಂಪೆನಿಯವರೂ ಬಂದಿದ್ದರು. — ಮಿ|| ವೀರಣ್ಣನವರ ಗುಬ್ಬಿ ನಾಟಕ ಕಂಪೆನಿಯವರೂ ಬಂದಿದ್ದರು. ನಾಲ್ಕಾರು ನಾಟಕಗಳನ್ನಾಡಿ ಜನರಮನಸ್ಸಂತೋಷ ಪಡಿಸಿದರು ಇವರಿಗೆ ಭಂಗಾರದ ಮೆಡಲ್ ಕೊಡಲ್ಪಟ್ಟಿತು ಮಿ|| ವೀರಣ್ಣನವರು 7 ನೆ ತಾರೀಖಿನ ದಿವಸ ಕಬೀರದಾಸ್ ನಾಟಕವನ್ನು ಅಧಿನಯಿಸಿ ಮಧ್ಯದಲ್ಲಿ ಪಲ್ಲಕ್ಕಿಯಲ್ಲಿ 250 ರೂಪಾಯಿಗಳನ್ನು ತಂದು ದನ ಪ್ರದರ್ಶನ ಕಮಿಟಿಯವರಿಗೆ ಕೊಟ್ಟು ಇನ್ನು 250 ರೂಪಾಯಿಗಳನ್ನು ಕೊಡುವದಾಗಿಯೂ ಆ ಮೊದಲಗಿನಿಂದ ಅವರ ಹೆಸರಿನಲ್ಲಿ ಒಂದು ಭಾವಿಯನ್ನು ದನಗಳಿಗೆ ನೀರಿಗಾಗಿ ತೆಗಿಸಬೇಕೆಂದೂ ತಿಳಿಯಪಡಿಸಿದರು ಉದಾರ ಮನಸ್ಸಿನಿಂದ ಮಾಡಿದ ಈ ದ್ರವ್ಯ ಸಹಯವನ್ನು ಸಾರ್ಥಕಪಡಿಸಿದಲ್ಲಿ ಮಿ| ವೀರಣ್ಣನವರಿಗೆ ಯಶಸ್ಸೂ ಕೀರ್ತಿಯೂ ಬರುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ೧೯೨೪ ರ ಜಾತ್ರೆಯಲ್ಲಿಯೂ ಸಹ ಇಲ್ಲಿಗೆ ಬಂದಿದ್ದ ರತ್ನಾವಳಿ ನಾಟಕ ಕಂಪೆನಿಯ ಮಿ| ವರದಾಚಾರ್ಯರವರು ತಮ್ಮ ಜ್ಞಾಪಕಾರ್ಥವಾಗಿ ಒಂದು ಭಾವಿ ತೆಗೆಸಬೇಕೆಂದು ಹೇಳಿ ಮೊಬಲಗು ಕೊಟ್ಟಹಾಗಿರುತ್ತೆ. ಆವರ ಜ್ಞಾಪಕಾರ್ಥವಾಗಿ ಭಾವಿಯು ಆದ್ದು ಜನಗಳಿಗೂ ದನಗಳಿಗೂ ಬಹಳ ಅನುಕೂಲವಾಗಿರುತ್ತೆ. ೫ ನೆ ತಾರೀಖಿನ ದಿನ ಮಿ|| ವೀರಣ್ಣನವರ ಕಂಪೆನಿಯವರು ಒಬ್ಬ ಹುಡಗನನ್ನು ಹೊಡೆದು ನೂಕಿದ್ದುದರಿಂದ ೩ ಗಂಟೆ ಕಾಲ ಜಗಳವಾಡಿ ನಂತರ ಎಷ್ಟೂ ಪ್ರಾಣಾಪಾಯವೇನೂ ಇಲ್ಲ. ಸಧ್ಯಾಡಿ ತಾರಣ ಇನ್ನೂ ಗೊತ್ತಾಗಿಲ್ಲ

ಮುನಿಸಿಪಾಲಿಟಿಯವರು ದೇವರ ಉತ್ಸವಗಳನ್ನು ನಡೆಸುತ್ತಾರೆಂತ ಎಲ್ಲರ ಮನಸ್ಸಿನಲ್ಲಿಯೂ ಇತ್ತು. ಆದರೆ ದೈವವಶಾತ್ ನಡೆಸಲೆ ಹೋದ ದ್ದಕ್ಕಾಗಿ ಎಲ್ಲರ ಮನಸ್ಸೂ ಸ್ವಲ್ಪ ನೊಂದಿರುತ್ತದೆ. ಮುಂದಾದರೂ ದೇವರ ಉತ್ಸವಗಳನ್ನು ನಡೆಸಲು ಪದು ಪುರೋಭಿವೃದ್ಧಿಗೂ ಮತ್ತು ಜನಗಳ ಸಂತೋಷಕ್ಕೂ ಕಾರಣವಾಗಿರುತ್ತೆ.

ಈ ತಿಂಗಳು ೧೦ ತಾರೀಖಿನಿಂದ ಮಿ|| ಸುಬ್ರಾಯ ಶೆಟ್ಟರು ಹಾಸನಕ್ಕೆ ಶ್ರವಣಬೆಳಗೊಳಕ್ಕೂ ಮೋಟಾರ್ ಸರ್ವಿಸನ್ನು ಇಟ್ಟಿರುತ್ತಾರೆ

ಹೆಣ್ಣು ಪಟ್ಟದ ವೃತ್ತಾಂತ

(ನಮ್ಮ ಸ್ವಂತ ಬಾತ್ಮಿದಾರರಿಂದ)

ಇಲ್ಲೀ ಅವಲಂಬಿತರಾಗಿದ್ದ ಮಿ| ರಾಮಜಂದ್ರರಾಯರು ಹೊಸದಾಗಿ ಅಸಿಸ್ಟೆಂಟ್ ಕಮಿಷನರಾಗಿ ನಿಯಮಿಸಲ್ಪಟ್ಟು ವರ್ಗಾಯಿಸಲ್ಪಟ್ಟುದಕ್ಕಾಗಿ ಅವರಿಗೆ ಇಲ್ಲಿಯ ಜಸರು ಎಂಟರ್‌ಟೇಮೆಂಟನ್ನು ಕೊಟ್ಟರು ಮಿ| ರಾಮಚಂದ್ರರಾಯರು ಕೆಲಸವನ್ನು ಮುಖವರ್ಜಿಯಿಂದಲೂ ಶಕ್ತಿತೆಯಿಂದಲೂ ನಡೆಸಿ ಜನಗಳ ಪ್ರೀತಿವಿಶ್ವಾಸವನ್ನು ಸಂಪಾದಿಸಿಕೊಂಡಿದ್ದರು. ಇವರು ತುಂಬಾ ಅಭಿವೃದ್ಧಿಗೆ ಬರಬೇಕಂಬುದೇ ಇಲ್ಲೀ ಜನರ ಆಶೆ

ಉಡಪಿಯ ಹರಿಕಥಾ ಸಂಘದ ೯ ವರ್ಷದ ಜಾಣಕೀಜಾಯಿ ಎಂಬ ಹುಡಗಿಯು ಇಲ್ಲಿ ಎರಡು ಹರಿಕಥೆಗಳನ್ನು ತುಂಬಾ ಸ್ವಾರಸ್ಯವಾಗಿ ಮಾಡಿ ಆ ಚಿಕ್ಕ ಹುಡುಗಿಗೆ ಇಷೆಲ್ಲಾಂದು ವಿದ್ಯೆ ಮತ್ತು ಜ್ಞಾನವಿದುವದನ್ನು ನೋಡಿ ಆಶ್ಚರ್ಯ ಭರಿತರಾಗಿರುತ್ತಾರೆ

ಸರ್ಕಾರೀ ಆರ್ಡರ್‌ಗಳ ಗೊತ್ತಾರ್ಡೆ

[ಪಬ್ಲಿಸಿಟಿ ಆಫೀಸಿನಿಂದ]

ಜೀವವಿಮೆಯ [ಲೈಫ್ ಇನ್‌ಷೂರೆನ್ಸ] ವರ್ಧಿಸಿದ ಪ್ರಜೆಗಳ ಶಾಖೆಗೆ ಸಂಬಂಧಪಟ್ಟ ನಿಬಂಧನೆಗಳ ಪೈಕಿ ಎಳನೇ ನಿಬಂಧನೆಯ 2 ನೇ ನಂಬರು ಸೂಚನೆಯನ್ನು ತಿದ್ದುಪಾಟುಮಾಡುವ ವಿಚಾರದಲ್ಲಿ ವೈಸೂರು ಸ್ಟೇಟ್ ಲೈಫ್ ಇನ್ಷೂರೆನ್ಸ್ ಕಮಿಟಿಯವರು ಮಾಡಿದ ಶಿಫಾರಿಸ್ಸನ್ನು ಸರ್ಕಾರಗಿವರು ಅಂಗೀಕರಿಸಿರುತ್ತಾರೆ; ಸದರಿ ತಿದ್ದುಪಾಟನ್ನು ಈ ಕೆಳಗೆ ನಮೂದಿಸಿದೆ,

"ಸ್ಥಿರಾಸ್ತಿಯ ಸಂಬಂಧದಲ್ಲಿ ಅಥವಾ ವಿದ್ಯುಚ್ಛಕ್ತಿಯ ಕೆಲಸದ ಸಂಬಂಧದಲ್ಲಿ ಅಪಾಯಗಳಿಗೆ ಗುರಿಯಾಗುವಂತಿರುವವರಿಗೂ ಮತ್ತು ಇತರ ಅಪಾಯಕರಗಳಿಂದ ಕಸುಬುಗಳನ್ನವಲಂಬಿಸುವವರಿಗೂ ಜೀವವಿಮೆ ಮಾಡುವದಕ್ಕೆ ಅವಕಾಶವನ್ನು ಕೊಡಲಾಗುವದಿಲ್ಲ"

ಮೈಸೂರು ಸಂಸ್ಥಾನದ ದಿವಾನ್‌ರವರಾದ ರಾಜಮಂತ್ರ ಧುರೀಣ ಎ. ಆರ್. ಬ್ಯಾನರ್ಜಿ, ಸಿ. ಎಸ್. ಐ., ಸಿ. ಐ. ಇ., ಯವರಿಗೆ 1925 ನೆ ಇಸವಿ ಫೆಬ್ರವರಿ 1ನೆ ಮುರ್ಕುಂ ಆಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನ ಲಾಗಾಯಿತು ಎರಡು ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವಕಾರಣ ಈ ಕಳಗೆ ಕಂಡ ಬದಲೀ ತೋಮು ಮಕರರಾತಿಗಳನ್ನು ಈ ದಿನ ಸಾದರಾದ ಒಂದು ಇಸ್ತಿಹಾರ್ನಾಮೆಯಲ್ಲಿ ಪ್ರಿಳಟಿಸಲಾಗಿದೆ —

ಕೌನ್ಸಿಲ್ಲಿನ ಮೊದಲನೆ ಮೆಂಬರಾದ ಮುಷೀರ್ ಉಲ್ ಮುಲ್ಕ್ ಮಿರ್ ಹಾಂಜಾ ಹುಸೇನ್ ಬಿ.ಎ ಬಿ.ಎಲ್ ರವರು ಬದಲೀ ತರೀಖು ದಿವಾನಂತಾಗಿ ರತಕ್ಕದ್ದು

ಕೌನ್ಸಿಲ್ಲಿನ ಎರಡನೆಯ ಮೆಂಬರಾದ ಮಿ|| ಕೆ. ಶ್ರೀನಿವಾಸಯ್ಯಂಗಾರ್, ಎಂ.ಎ. ಯವರು ಬದಲಿ ತರೀಖು ಕೌನ್ಸಿಲ್ಲಿನ ಮೊದಲನೆ ಮೆಂಬರಾಗಿರತಕ್ಕದ್ದು.

ದಿವಾನ್ಯ ಕಮಿಷನರಾದ ಮಿ|| ಕೆ. ಚಾಂಡಿ, ಬಿ.ಎ. ಯವರು ಬದಲೀ ತರೀಖು ಕೌನ್ಸಿಲ್ಲಿನ ಎರಡನೆ ಮೆಂಬರಾಗಿರತಕ್ಕದ್ದು.

ಆದೇ ತಾರೀಖಿನ ಇನ್ನೊಂದು ಇಸ್ತಿಹಾರ್ನಾಮೆಯ ವೆಯಿಮೂಲ್ಕ ಇದರಡಿಕಂಡ ಬದಲಿ ತರೀಖು ಮಕರರಾತಿಗಳು ಮಂಜೂರ್ಮಾಡಲ್ಪಟ್ಟಿವೆ. —

ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್ರವರಾದ ಮಿ||ಬಾಲಸುಂದರಂ ಅಯ್ಯರ್, ಬಿ.ಎ., ಯವರು ರವೆನ್ಯೂ ಕಮಿಷನರಾಗಿ ಬದಲಿ ತರೀಖು ಕೆಲಸ ನೋಡಕಕ್ಕದ್ದು

ಸರ್ಕಾರದ ಚೀಫ್ ಸೆಕ್ರೆಟೆರಿಯವರಾ ಮಿ|| ಕೆ. ಮಾತ್ಮನ್ ರವರು ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್ ರವರಾಗಿ ಬದಲೀ ತರೀಖು ಕೆಲಸ ನೋಡಕಕ್ಕದ್ದು.

ಕುಡಿಯುವ ನೀರಿನ ಭಾವಿಗಳನ್ನು ತೋಡಿಸುವದಕ್ಕಾಗಿ ಒದಗಿಸುವ ಹಣವ ವಿಷಯದಲ್ಲಿ ಸರ್ಕಾರದವರು ೨೪ - ೨೫ ನೆ ಸಾಲಿನ ಬಡ್ಜೆಟ್ ಗ್ರಾಂಟಾದ ೪೦ ಸಾವಿರ ರೂಪಾಯಿಗಳನ್ನು ಈ ರೀತಿ ಹಂಚಕಕ್ಕದ್ದೆಂದು ಆಜ್ಞಾಪಿಸಿರುತ್ತಾರೆ

ಬೆಂಗಳೂರು ಡಿಸ್ಟ್ರಿಕ್ಟ್	೪	ಸಾವಿರ
ಮೈಸೂರು	೪	"
ಕೋಲಾರ	೪	"
ತುಮಕೂರು	೫	"
ಶಿವಮೊಗ್ಗಾ	೪	"
ಕಡೂರು	೬	"
ಹಾಸನ	೫	"
ಚಿತ್ರದುರ್ಗ	೫	"

ಅನಿರೀಕ್ಷಿತವಾಗಿ ಸಂಭವಿಸುವ ವೆಚ್ಚಗಳನ್ನು ವಹಿಸುವಬಗ್ಗೆ ೩ ಸಾವಿರ ರೂಪಾಯಿಗಳ ಮೊಬಲಗನ್ನು ರಿಜರ್ವಾಗಿ ಇಟ್ಟಿರಕಕ್ಕದ್ದು.

1923 ನೇ ಸಾಲಿನ ಅಕ್ಟೋಬರಿನಲ್ಲಿ ಯುನೈಟೆಡ್ ರಾಜ್ಯದಲ್ಲಿ 1917926 ಜನ ಹೆಂಗಸರು ಗಂಡಸರಿಗಿಂತ ಹೆಚ್ಚಾಗಿದ್ದಾರೆಂದೂ, 292408 ಮದುವೆಗಳು ನಡದುವೆಂದೂ, ಅದರಲ್ಲಿ 12416 ಜನ ಮದಣಿಗರು 21 ವಯಸ್ಸಿಗೆ ಕಡಮೆಯವರಾಗಿದ್ದಾರೆಂದೂ, ಒಬ್ಬ 93 ವಯಸ್ಸಿನವನೆಂದೂ, ಒಂದು ಮದುವೆಯಲ್ಲಿ ವಾಕ್ರ 16 ವರ್ಷದ ಹುಡುಗ 15 ವರ್ಷದ ಹುಡಗಿಯನ್ನು ವಿವಾಹಿಸಿದನೆಂದೂ, 26 ಹುಡಗಿಯರು 15 ವಯಸ್ಸಿನವರೆಂದೂ. 16 ವರ್ಷದ ಒಬ್ಬ ಹುಡುಗಿಯು 70 ವರ್ಷದ ಒಬ್ಬ ಮುದುಕನಿಗೆ ಮದುವೆಮಾಡಲಾಯಿತೆಂದೂ ತಿಳಿದುಬಂದಿದೆ.

ವೃತ್ತಾಂತಸಂಗ್ರಹ

— ಬರುವ ತಿಂಗಳಲ್ಲಿ ಶ್ರವಣಬೆಳಗೊಳದ ದೊಡ್ಡಜಾತ್ರೆ ನಡೆಯುವ ಕಾಲದಲ್ಲಿ ಮಹಾತ್ಮಾ ಗಾಂಧಿಯವರು ಬರಬೇಕೆಂದು ಅಲ್ಲಿಯ ಜೈನ ಪ್ರಮುಖರು ಮಹಾತ್ಮರನ್ನು ಪ್ರಾರ್ಥಿಸಿರುವರೆಂದು ತಿಳಿಯಬಂದಿದೆ.

ಬೆಗಾಮಿನಿಂದ ಕಲ್ಕತ್ತಾಕ್ಕೆ ಕಳೆದ 31 ನೇ ತಾರೀಖು ಸೇರಿದಾಭ್ಯ, ವ || ಸಿ ಅರ್ ದಾಸ ಮಗೆ ದೇಹದಲ್ಲಿ ವಿಪರೀತ ಅಸ್ವಸ್ಥತೆ ಶುರುವಾಗಿದ್ದುದಾಗಿಯೂ, ಈಗ ಸ್ವಲ್ಪ ವಾಸಿಯಾಗಿದೆಯೆಂದೂ ತಿಳಿಯಬಂದಿದೆ.

ಅಲಿವುರದಲ್ಲಿ ಒಂದು ಮನೆಯ 9 ಜನರನ್ನು ತಜೀವಹಿತ ಸ್ಮಡಿದ್ದಕ್ಕಾಗಿ, ಇಬ್ಬರಿಗೆ ಏಜಾರಣೆಯಿಂದ ಮರಣದಂಡನೆ ವಿಧಿಸಲಾಗಿದೆ.

ಪೂನಾ ಮುನಿಸಿಪಾಲಿಟಿಯ ಪ್ರೆಸಿಡೆಂಟ್ ಪದವಿಗೆ ಮೆ || ಎಸ್. ಸಿ. ಕೆಲ್ಕರರವರು ರಾಜೀನಾಮೆ ಕೊಟ್ಟಿರುವರೆಂದೂ ಇದನ್ನು ಜಬರಿಸಿ, ಅಂಗೀಕಾರ ಮಾಡಿದಲ್ಲಿ ಬೇರೆ ಪ್ರೆಸಿಡೆಂಟರು ಚುನಾವಣೆ ಮಾಡತಕ್ಕುದು ಅವಶ್ಯವಾದುದರಿಂದ, ಈ ತಿಂಗಳು 18 ನೇ ತಾರೀಖಿನದಿದ ಅಲ್ಲಿ ಮುನಿಸಿಪಾಲಿಟಿಯವರು ಎಸಾಟಿಂಗ್ ಇಟ್ಟುಕೊಂಡಿದಾರೆ.

ಕೋತಿಗಳ ಅವಯವಗಳೊಂದನ್ನು ತೆಗೆದು ಮನುಷ್ಯನ ಶರೀರಕ್ಕೆ ಅದನ್ನು ಸೇರಿಸಿದಲ್ಲಿ ವೃದ್ಧರು ಪ್ರಾಯಸ್ಥರಾಗುವರೆಂದು ಈಗಿನ ವೈದ್ಯರೊಬ್ಬರು ಕಂಡು ಹಿಡಿದಿರುವರೆಂದೂ, ಈ ರೀತಿ ಉಪಯೋಗಕ್ಕಾಗಿಯೆ ಕೆಲವು ದಿನಗಳ ಹಿಂದೆ ಜರ್ಮನಿ ದೇಶವೊಂದಕ್ಕೇ ಒಂದು ಹಡಗಿನಲ್ಲಿ ಸಾವಿರ ಕೋತಿಗಳನ್ನು ಬೊಂಬಾಯಿನಿಂದ ಕಳಿಸಿರುವರೆಂದೂ ತಿಳಿಯಬಂದಿದೆ

ಕಾಮಕೋಟಿ ಪೀಠದ ಶ್ರೀ ಜಗದ್ಗುರುಗಳು 500 ರೂಪಾಯಿಗಳನ್ನು ಕೋಹಟ್ ಫಂಡಿಗೆ ಕೊಟ್ಟಿರುವರಲ್ಲದೆ, ಇಂಡಿಯಾ ದೇಶದಲ್ಲಿ ಶಾಂತಿ ಸ್ಥಾಪನೆಯ ವಿಷಯದಲ್ಲಿ ಮನಸ್ಸಿರುವ ಪ್ರತಿಯೊಬ್ಬರೂ ಮುಖ್ಯವಾಗಿ ತಮ್ಮ ಶಿಷ್ಯರೆಲ್ಲರೂ ಈ ಫಂಡಿಗೆ ತಮ್ಮ ಕೈಲಾದಷ್ಟು ಹಣಕೊಟ್ಟು ಕೋಹಟ್ಟನಲ್ಲಿ ತೊಂದರೆಯಿಂದ ಮರುಗುತ್ತಿರುವ ನಮ್ಮ ದೇಶೀಯರಿಗೆ ಸಹಾಯಮಾಡಬೇಕೆಂದು ತಿಳಿಯಪಡಿಸಿರುತ್ತಾರೆ.

ಗ್ರೇಟ್ ಇಂಡಿಯನ್ ಪೆನಿನ್ಸುಲಾ ರೈಲ್ವೆಯನ್ನು ಇಂಡಿಯಾ ಸರ್ಕಾರದವರು ವಹಿಸಿದಿನ ಜುಲೈ ಗುರ್ರೇ ಆಗಾಯ್ತು ತಾವು ವಹಿಸಿಕೊಂಡು ನಡೆಸಿ ವವರಾಗಿರುವರು.

ಹಿಂದೀಭಾಷಾ ಪ್ರಚಾರಕ್ಕೆ ಬಹು ಪ್ರಯತ್ನವಹಿಸಿ ಕೆಲಸಮಾಡುತ್ತಿರುವ ವ || ಪುರುಷೋತ್ತಮದಾಸ್ ಟಾಂಡರ್‌ರವರೂ ಅವರ ಜೊತೆಯವರೂ ತಿರುಚನಾಪಳ್ಳಿಯ ಆವದಯಾರ್ ಕೋವಿನಲ್ಲಿ ಕಾಂಮಕೋಟಿ ಪೀಠದ ಶ್ರೀ ಜಗದ್ಗುರುಗಳ ದರ್ಶನ ತೆಗೆದುಕೊಂಡು ಆಗ ಇವರು ಸ್ವಾಮಿಗಳನ್ನು ಹಿಂದೀಭಾಷಾ ಪ್ರಚಾರಕ್ಕೆ ಸಹಾಯಮಾಡಬೇಕೆಂದೂ, ಅವರ ಕೈಳಗಿನ ಪಾಠಶಾಲೆಗಳಲ್ಲಿ ಹಿಂದೀಭಾಷೆಯನ್ನು ಕಲಿಯಲು ನಿರ್ಬಂಧಿಸಬೇಕೆಂದೂ ತಿಳಿಯಪಡಿಸಲು, ಸ್ವಾಮಿಗಳು ಇದಕ್ಕೆ ಒಪ್ಪಿ, ತಾವೂ ಹಿಂದೀಭಾಷೆ ಕಲಿಯುವದಾಗಿಯೂ, 2 ವರ್ಷಗಳೊಳಗೆ ಉತ್ತರದೇಶಸಂಚಾರ ಹೊಂಡುವುದರೊಳಗೆ ಚೆನ್ನಾಗಿ ಕಲಿತುಕೊಳ್ಳುವದಾಗಿಯೂ ತಿಳಿಸಿ, ಹಿಂದೀಪ್ರಚಾರದ ಬಗ್ಗೆ 100 ರೂಪಾಯಿಗಳನ್ನು ತಮ್ಮ ಆಶೀರ್ವಾದದೊಡನೆ ಕೊಟ್ಟರು.

ಹುನಸಟ್ಟಿನ ಪ್ರಸಿದ್ಧ ರೇಷ್ಮೆ ವ್ಯಾಪಾರಿಗಳಾದ ಮೆ || ಡಿ. ವಿ. ರಾಮಸಂಜೀವರೆಡ್ಡಿಯವರು ಅಲ್ಲಿನ ಕಾಲ್ನಡೆಗಳ ಆಸ್ಪತ್ರೆಗಾಗಿ ಒಂದು ಕಟ್ಟಡವನ್ನು ಸ್ವಂತ ಖರ್ಚಿನಿಂದ ಕಟ್ಟಿಸಿಕೊಡುವುದಾಗಿ ವಾಗ್ದಾನಮಾಡಿರುವಂತೆ ತಿಳಿಯಬಂದಿದೆ,

ಮೈಸೂರು ಸಿಟಿಯಲ್ಲಿ 100 ಕ್ಕೆ ಮೇಲ್ಪಟ್ಟ ಗರಡಿಗಳಿವೆಯೆಂದೂ, ಅಲ್ಲಿ ಜಪಜಾಟ, ಕೈತನ ಹೆಚ್ಚಾಗಿವೆಯೆಂದೂ, ಅವುಗಳನ್ನು ಮುಚ್ಚಿಸಲು ಸರ್ಕಾರದವರಿಂದ ಸಿಟಿ ಪೋಲೀಸ್ ಸೂಪರಿಂಟೆಂಡೆಂಟರು ಒಪ್ಪಿಗೆಪಡೆದಿದ್ದಾರೆ ಗರಡಿ ಇಟ್ಟುಕೊಂಡ್ದರ ವರ್ಷಕ್ಕೆ 10 ರೂಪಾಯಿ ಕೊಟ್ಟು ಲೈಸೆನ್ಸ್ ಪಡೆಯಬೇಕು.

ಪ್ರಪಂಚದ ಎಲ್ಲಾ ಸಾಗರಗಳಿಗಿಂತಲೂ ಪೆಸಿಫಿಕ್ ಸಾಗರವೇ ತುಂಬಾ ಆಳವಾದ್ದು ಈಜೆಗೆ ಆಳತಿಮಾಡಿದ ಅನೇಕ ಕಡೆಗಳು 30 ಸಾವಿರ ಅಡಿಗಳಿಗಿಂತಲೂ ಆಳವಾಗಿವೆ. ಜಪಾನಿನ ಸೈರುಷ್ಯ ದಿಕ್ಕಿನಲ್ಲಿ ಸುಮಾರು ೬| ಮೈಲಿಗಳಷ್ಟು ಆಳವಾಗಿದೆ. ಆದರೆ ಅಟ್ಲಾಂಟಿಕ್ ಸಾಗರದ ಅತ್ಯಂತ ಆಳವಾದ ಸ್ಥಳವು 27972 ಅಡಿ ಮಾತ್ರ

ಹೈದರಾಬಾದ್ ಸೈಜಾಮರು ತಮ್ಮ ಸಂಸ್ಥಾನದಲ್ಲಿ ಖರ್ಚು ಕಡಿತಾಮಾಡಲು ಆಫೀಸ್‌ಗಳಿಗೆ ಕೂಡುತ್ತಿದ್ದ ಸ್ಟೇಷನರೀ ಸಾಮಾನುಗಳನ್ನೂ ಆಫೀಸರುಗಳ ಆಲೋಯೆನ್ಸನ್ನೂ ಸರ್ಕಾರೀ ಲಂಜಾವನ್ನೂ ಕಡಮೆಮಾಡಿರುವದಲ್ಲದೆ, ಆಫೀಸರ ಮೇಲೆ ಆದಾಯತೆರಿಗೆ ವಸೂಲುಮಾಡುವಂತೆ ಹುಕುಂ ಕೊಟ್ಟಿರುತ್ತಾರೆ.

ಬೆಂಗಳೂರಿನಿಂದ ಪದ್ಯದಲ್ಲಿಯೇ "ತೈಭಾಷಾ ಪತ್ರಿಕೆಯೊಂದು ಪ್ರಕಟಪತ್ರಿಕೆಯಾಗಿ ಹೊರಡುವದಾಗಿ ತಿಳಿಯಬಂದಿದೆ.

ಕ್ರಿಸ್ತಶಕ ಹಬ್ಬದ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಬಹು ಭಯಂಕರವಾದ ಬಿರುಗಾಳಿ ಹೊರಟು, ತುಂಬಾ ಮಳೆಯೂ ಸುರಿಯಿತು.

ಇಂಗ್ಲೆಂಡಿನಿಂದ ಇಂಡಿಯಾಕ್ಕೆ ವಿಮಾನಮೂಲಕ ಪ್ರಯಾಣಮಾಡಬೇಕಾದರೆ 52 ಪೌಂಡು ಚಾರ್ಜು ಬೀಳುತ್ತದಂತೆ.

ಬೆಸೆಂಟಮ್ಮನವರಿಗೆ ಬೆಳಗಾಮಿನ ಕಾಂಗ್ರೆಸ್ ನಡವಳಿಕೆಗಳು ಅಷ್ಟು ತೃಪ್ತಿದಾಯಕವಾಗಿ ಕಂಡುಬರಲಿಲ್ಲವಂತೆ. ಕಾಂಗ್ರೆಸ್ ಸಭಾ ಸದರು ನೂಲೇ ನೂಲಬೇಕೆಂಬ ತರಾವೂ ಸ್ವರಾಜ್ಯಪಂಗಡದವರು ಕೌನ್ಸಿಲಿನಲ್ಲಿ ನಡೆಯಬೇಕಾದ ರೀತಿಯ ವಿಷಯದ ಆಜ್ಞೆಯು ಇವರನ್ನು ತುಂಬಾ ಚಿಂತಾಕ್ರಾಂತರನ್ನಾಗಿ ಮಾಡಿರುತ್ತವೆಯಂತೆ. ಅಸಹಕಾರ ಪ್ರಾರಂಭವಾಗುವದಕ್ಕೆ ಮುಂಚಿನ ಕಾಂಗ್ರೆಸ್ (ಅಂದರೆ 1920 ಕ್ಕೆ ಹಿಂದೆ) ನ್ನೆ ಹುನಃ ಪುನರುಜ್ಜೀವನ ಮಾಡಬೇಕೆಂದೂ, ಅದಕ್ಕಾಗಿ ಮುಂದಿನ ತಿಂಗಳಲ್ಲಿ ಡೆಲ್ಲಿಯಲ್ಲೂ, ಅಲಹಾಬಾದಿನಲ್ಲೂ ಒಂದು ಸಮ್ಮೇಳನ ನಡೆಸಬೇಕೆಂದು ಕಾಂಗ್ರೆಸ್ಸಿನ ಹಿಂದಿದ್ದ ಮೆಂಬರುಗಳಿಗೂ ಮತ್ತು ಇಂಡಿಯಾದೇಶದ ಎಲ್ಲಾ ಪ್ರಮುಖ ಸಂಸ್ಥೆಗಳಿಗೂ ತಿಳಿಯಪಡಿಸಿರುತ್ತಾರೆ. ಈ ಹೊಸ ಸಂಸ್ಥೆಯನ್ನು "ಆಲ್ ಇಂಡಿಯಾ ಪೊಲಿಟಿಕಲ್ ಕಾಂಗ್ರೆಸ್ ಎಂದು" ನಾಮಾಂಕಿತ ಮಾಡಬೇಕೆಂದು ಇರ ಆಶೆ!

ರಾಜಧಾನಿಯ ಮುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟರನ್ನು ಈ ತಿಂಗಳು 22 ನೇ ತಾರೀಖು ಗುರುವಾರ ಚುನಾಯಿಸಲು ಗೊತ್ತಾಗಿದೆ ಮೆ || ಗಳಾದ ಸುಲ್ತಾನ್ ಅಲಿಖಾರ್‌ರವರೂ, ಎಂ. ರಾಮಸ್ವಾಮಿಯವರೂ, ವಿ. ಎಸ್. ರಾಮಸ್ವಾಮಿಯ್ಯಂಗಾರ್ಯರವರೂ ಉಮೇದುವಾರರಾಗಿ ನಿಂತಿರುತ್ತಾರೆ.

ರೋಮು' ಪಟ್ಟಣದಲ್ಲಿ ಪ್ರಕಟಿಸಲ್ಪಡುತ್ತಿದ್ದ ವಿರುದ್ಧಪಂಗಡದ ಕೆಲವು ಪತ್ರಿಕೆಗಳನ್ನು ಅಲ್ಲಿಯ ಸರ್ಕಾರದವರು ನಿಲ್ಲಿಸಿರುತ್ತಾರೆ,

ಲಂಡನ್ನಿನ ಕಿಂಗ್ಸ್‌ಬೆಂಚ್ ಕೋರ್ಟಿನಲ್ಲಿ ಆರ್ಮೀನಿಯಾ ಟೊಬ್ಯಾಕೂ ಕಂಪೆನಿಯವರಿಗೂ ಗಾರ್ಡಿಯನ್ ಇನ್ಷೂರೆನ್ಸ್' ಕಂಪೆನಿಯವರಿಗೂ ನಡೆಯುತ್ತಿರುವ ಮೊಖದ್ದಮೆಯಲ್ಲಿ ಸಾಕ್ಷ್ಯ ಕೊಡಿಯಲು ಅರ್ಮೀನಿಯವರೂ, ಟರ್ಕಿಯವರೂ, ಗ್ರೀಕರೂ, ಫ್ರೆಂಚರೂ, ಇಟಲಿಯವರೂ ಮುಂತಾದ ಹಲವು ಜನಾಂಗದವರಿಗೆ ಸಾಕ್ಷ್ಯವು 6 ಭಾಷೆಗಳಲ್ಲಿ ತೆಗೆದುಕೊಳ್ಳಲ್ಪಟ್ಟಿರುತ್ತದೆ. 8 ಜನ ಭಾಷಾಂತರಿಪರ್ತಕರು!

ಇಂಡಿಯಾ ದೇಶದ ಒಂದಾನೊಂದು ದೇವಸ್ಥಾನದಿಂದ ಕಳುವಾಗಿದ್ದ ಒಂದು ವಜ್ರವು ಮೊದಲು ಫ್ರಾನ್ಸ್‌ದೇಶವನ್ನು ಸೇರಿದಾಗಿನಿಂದಲೂ ಅದರ ಯಜಮಾನರಿಗೆಲ್ಲಾ ಅನಿಷ್ಟ ಪರಂಪರೆಗಳನ್ನು ತಂದಿರುತ್ತದೆ. ಇದೇ ಲೋಕವಿಖ್ಯಾತವಾದ ಹೋಪ್ ವಜ್ರವೆಂಬುವದು. ಫ್ರಾನ್ಸಿನ ರಾಣಿಯಾಗಿದ್ದ ಮೇರಿ ಆಂಟಾಯ್ನೆಟ್' ಎಂಬಾಕೆಯು ಅದನ್ನು ಕಂಠಾಭರಣದಲ್ಲಿ ಸೇರಿಸಿ ಧರಿಸಿದ್ದರಿಂದ ಆಕೆಯು ಕಡೆಯಲ್ಲಿ ರಾಜದ್ರೋಹಕ್ಕಾಗಿ ಆ ಕಂಠವನ್ನೇ ಗಲ್ಲಿಯ ಮರದ ಮೇಲಿಡಬೇಕಾಯಿತು. ಕಾಸಿಟೋಸ್ಕ ಎಂಬ ರಷ್ಯಾ ರಾಜಪುತ್ರನ ಕೈಸೇರಲು ಅತನು ಆ ದೇಶದ ದ್ರೋಹಿಗಳಿಂದ ಕೊಲೆಯಾದನು. ಆನಂತರ ಈ ವಜ್ರವು ಗ್ರೀಕ್ ವರ್ತಕನೊಬ್ಬನ ವಶವಾಗಿ ಆತನೂ ತನ್ನ ಹೆಂಡತಿ ಮಕ್ಕಳೊಡನೆ ಒಂದು ಅಪಾಯಕ್ಕೆ ಸಿಕ್ಕಿ ವ್ಯಕ್ತಪಟ್ಟನು. ತುರ್ಕಿ ಸುಲ್ತಾನನಾಗಿದ್ದ ಅಬ್ದುಲ್ ಮಜೀದರು ಆ ವಜ್ರವನ್ನು ಮೋಹಿಸಿ ತಮ್ಮ ಆಭರಣಕ್ಕೆ ಸೇರಿಸಿದ್ದರಿಂದ ರಾಜ್ಯಭ್ರಷ್ಟರಾಗಿ ಹೋದರು. ಇದಾದಮೇಲೆ ವಜ್ರವು ಪರ್ಷಿ ವರ್ತಕನಾದ ಹಾಬಿ ಎಂಬುವನನ್ನು ಸೇರಿದ್ದರಿಂದ ಆತನು ಹಡಗಿನಲ್ಲಿ ಮುಳುಗಿಹೋಗುವಂತಾಯಿತು ಅಮೇರಿಕಾ ದೇಶದ ಕೋಟ್ಯಾಧೀಶ್ವರನಾದ ಎಡ್ವರ್ಡ್ ಲೀನ್' ಎಂಬಾತನು ಆ ವಜ್ರವನ್ನು ಕೊಂಡಿದ್ದರಿಂದ ಆತನ ಹೆಂಡತಿಯೂ ಮಗನೂ ಮೋಟಾರು ಗಾಡಿಯ ಅಪಾಯಕ್ಕೆ ಸಿಕ್ಕಿ ಮೃತರಾದರು. ನಾಟಕಗಾರ್ತಿಯಾದ ಮೇಯೋಡ್' ಎಂಬುವಳು ಅದನ್ನು ಹೊಂದಿದ್ದರಿಂದ ಆಕೆಯ ಗಂಡನಾದ ಕ್ಯಾಪ್ಟನ್' ಸ್ಕಟ್ಸ್ ಎಂಬುವನು ಈಗ ಗುಂಡಿನ ಪೆಟ್ಟಿನಿಂದ ಮೃತಪಟ್ಟರುವನೆಂದು ತಿಳಿಯಬರುತ್ತದೆ ವಜ್ರದಲ್ಲಿ ಈ ಗುಣವು ಇರುವದೆಂದೇ ಹಿಂದೂ ದೇಶೀಯರು ಅವುಗಳನ್ನು ಕೊಳ್ಳುವಾಗ ಲೋಪಗಳನ್ನು ನೋಡಿ ಕೊಳ್ಳುವರೆಂದು ನಂಬಬೇಕಾಗಿದೆ (ಒ. ಪ)

ಮೈಸೂರಾಯರವರು ಮದ್ರಾಸಿನ 'ರಿಲಿಜಸ್ ಎಂಡೊವ್‌ಮೆಂಟ್' ಬಿಲ್ಲಿಗೆ ತಮ್ಮ ಖಂಡೀಕಾರವನ್ನು ಕೊಟ್ಟಿರುತ್ತಾರೆ

ಮತ್ರಾದಲ್ಲಿ ಕುರ್ಥೀ ಸಮ್ಮೇಳನವು ಬರುವ ತಿಂಗಳು 19 ಕ್ಕೆ ನಡೆಯುವದು

Printed and published by M.S. Krishna Rao at the SATYAVADI Press, Myosre